**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ23-06-2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ ಪಿ ಎಂ ವಕೀಲರಿಂದಃ**

ವಾದಿಯವರ ಜಾಗದಲ್ಲಿ 2 ಎಕರೆ 9 ಗುಂಟೆಯ ಜಾಗ ನಮಗೆ ಬರಬೇಕು. ನಾವು ಕ್ರಯಕ್ಕೆ ಪಡೆದುಕೊಳ್ಳುವಾಗ ಅದರ ಸರ್ವೆ ನಂ.97/2 ಆಗಿತ್ತು. ನಾವು ಕ್ರಯಕ್ಕೆ ಪಡೆದ 2 ಎಕರೆ 9 ಗುಂಟೆ ಜಾಗದಲ್ಲಿ ನಾವು ಸ್ವಾಧೀನದಲ್ಲಿದ್ದೇವೆ. ವಾದಿಯವರು 4 ಎಕರೆ 18 ಗುಂಟೆಗೆ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯವರು ಸರ್ವೆ ನಂ.97/1 ಕ್ಕೆ ಸಂಬಂದಪಟ್ಟಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಹಿಂದೆ ಓ ಎಸ್ 9/2018 ರಂತೆ ಸರ್ವೆ ನಂ 97/1 ರಲ್ಲಿ ಇರುವ ಒಟ್ಟು 4 ಎಕರೆ 18 ಗುಂಟೆ ಜಮೀನಿನಲ್ಲಿ 2 ಎಕರೆ 9 ಗುಂಟೆ ಜಾಗವನ್ನು ನಮಗೆ ಬಿಟ್ಟುಕೊಡಬೇಕೆಂದು ದಾವೆ ಸಲ್ಲಿಸಿರುತ್ತೇವೆ. 97ನೇ ಸರ್ವೆ ನಂ ನಾವು ಖರೀದಿ ಮಾಡಿದ ಜಾಗವನ್ನು ಹೊರತುಪಡಿಸಿ ಬ್ಲಾಕ್ ನಂ. 97/78 ರಲ್ಲಿ ನನ್ನ ತಾತನಿಗೆ ಮಂಜೂರಾದ ಜಾಗ ಇದೆ. ಸರ್ವೆ ನಂ.97/1 ರಲ್ಲಿ ನಮಗೆ ಸೇರಿದ ಜಾಗದಲ್ಲಿ ವಾದಿಯವರು ಸ್ವಾಧೀನದಲ್ಲಿ ಇರುವ ಬಗ್ಗೆ 2017-18ನೇ ಇಸವಿಯಲ್ಲಿ ಅಳತೆ ಮಾಡಿಸಿರುತ್ತೇನೆ. ಆ ರೀತಿ ಅಳತೆ ಮಾಡಿಸಿದಾಗ ವಾದಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದು ಸರ್ವೆಯವರು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಅಜ್ಜನಿಗೆ ಮಂಜೂರಾದ ಜಾಗದ ಸರ್ವೆ ನಂಬರ್ ಗೊತ್ತಿಲ್ಲ. ನನ್ನ ತಾತನಿಗೆ ಮಂಜೂರಾದ ಬ್ಲಾಕ್ ನಂ.78 ರ ಜಾಗ ಯಾವ ಸರ್ವೆ ನಂಬರ್ ನಲ್ಲಿ ಇದೆ ಎಂದು ವಿಚಾರಿಸಿರುತ್ತೇನೆ. ಸದರಿ ಸ್ವತ್ತು ಸಹ ಸರ್ವೆ ನಂ.97 ರಲ್ಲೇ ಇದೆ ಎಂದು ಅಧಿಕಾರಿಗಳು ಹೇಳಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ನೀಡಿರುವುದಿಲ್ಲ. ದಾಖಲೆಗಾಗಿ ಅರ್ಜಿ ನೀಡಿದ್ದೇನೆ, ಆದರೆ ಇನ್ನು ಸಿಕ್ಕಿರುವುದಿಲ್ಲ. ಆ ಬಗ್ಗೆ ಹಿಂಬರಹವನ್ನು ಹಾಜರುಪಡಿಸಬಹುದೆ ಎಂದರೆ ಸಾಕ್ಷಿದಾರರು ಬ್ಲಾಕ್ ನಂ.78 ರ ಜಾಗಕ್ಕೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಬ್ಲಾಕ್ ನಂ.78 ರ ಜಾಗಕ್ಕೂ ಸರ್ವೆ ನಂ.97 ರಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಕ್ರಯಕ್ಕೆ ಪಡೆದ ಸ್ವತ್ತಿನ ಪೂಃ ಪುಟ್ಟಮ್ಮ ರವರ ಜಾಗ, ಪಃ ಧರ್ಮಶೆಟ್ಟಿ ರವರ ಜಾಗ, ಉಃ ನನ್ನ ತಾತನ ಜಾಗ ಮತ್ತು ನಾವು ಕ್ರಯಕ್ಕೆ ಪಡೆದ ಜಾಗ, ದಃ ಜವರಯ್ಯ ಮತ್ತು ವಾದಿಯವರ ಜಾಗ ಇದೆ. ಉತ್ತರದಲ್ಲಿರುವ ಬಸವಯ್ಯ ಎಂಬುವವರ ಜಾಗ ವಾದಿಯವರದ್ದು ಎಂದರೆ ಸರಿಯಲ್ಲ. ಬಸವಯ್ಯ ಉಃ ಕೆಂಗಯ್ಯ 1ನೇ ವಾದಿಯ ಗಂಡ ಎಂದರೆ ಸರಿಯಲ್ಲ. ವಾದಿಯವರ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ತಾಯಿಯ ತಂದೆಯ ಹೆಸರು ಬಸವಯ್ಯ. ತೀರಿಕೊಂಡಿರುವಂತಹ ನನ್ನ ದೊಡ್ಡಮ್ಮಂದಿರಿಗೆ ಮಕ್ಕಳಿದ್ದಾರೆ. ನನ್ನ ಅಜ್ಜನಿಗೆ ಒಟ್ಟು ಎಷ್ಟು

ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಜಾಗವನ್ನು ಅವರ ಮಕ್ಕಳು ಹಂಚಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ವಾದಿಯವರು ಸಲ್ಲಿಸಿರುವ ದಾವೆ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಾವು ಕ್ರಯಕ್ಕೆ ಪಡೆದ ಸ್ವತ್ತು ಮತ್ತು ವಾದಿಯವರ ಸ್ವತ್ತು ಜಂಟಿ ಜಾಗವಾಗಿರುತ್ತದೆ. ಓ ಎಸ್ 09/2018 ರ ಷಡ್ಯೂಲ್ ನಲ್ಲಿ ವಾದಿಯವರ ಜಾಗ ಎಲ್ಲಿ ಬರುತ್ತದೆ ಎಂದು ತೋರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯ ವಿಚಾರಗಳು ನನಗೆ ಗೊತ್ತು. ಸುಳ್ಳು ಚೆಕ್ಕುಬಂದಿಯನ್ನು ತೋರಿಸಿ ಓ ಎಸ್ 9/2018 ರ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ 2 ಎಕರೆ 9 ಗುಂಟೆಯ ಜಾಗಕ್ಕೆ ವಾದಿಯವರು ಯಾವತ್ತೂ ತೊಂದರೆಪಡಿಸಿಲ್ಲ ಎಂದರೆ ಸರಿಯಲ್ಲ. ಓ ಎಸ್ 9/2018 ನಮ್ಮ ಪರವಾಗಿ ಡಿಕ್ರಿಯಾಗಿದೆ ಎಂದರೆ ಸರಿ. ಆ ನಂತರದಲ್ಲೂ ವಾದಿಯವರು ನಮಗೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಕೈಬರಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಸಂಪೂರ್ಣವಾಗಿ ವಾದಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಪಿ.2 ರ ಪ್ರಕಾರ 1ನೇ ವಾದಿಯ ಗಂಡನಿಗೆ ದಾವಾ ಸ್ವತ್ತಿನಲ್ಲಿ ಗೇಣಿದಾರರು ಎಂದು ನಮೂದಾಗಿದೆ ಎಂದರೆ ಸಾಕ್ಷಿದಾರರು ಬ್ಲಾಕ್ ನಂ.77 ರಲ್ಲಿ 2 ಎಕರೆಗೆ ಗೇಣಿದಾರರಾಗಿರುತ್ತಾರೆ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ನಿಪಿ.3 ರ ಪ್ರಕಾರ ಗೇಣಿದಾರರೆಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅದರಲ್ಲಿ ತಿದ್ದುಪಡಿ ಮಾಡಿಲಾಗಿದೆ ಎಂದು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.4 ರ ಪ್ರಕಾರ ಸರ್ವೆ ನಂ.97 ರಲ್ಲಿ ಅನಂತರಾಮಯ್ಯ ರವರಿಂದ ಬಸವಯ್ಯ ಉಃ ಕೆಂಗಯ್ಯ ರವರಿಗೆ 4 ಎಕರೆ 18 ಗುಂಟೆ ಬಂದಿರುವುದಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ.7 ರ ಪ್ರಕಾರ ದಕ್ಷಿಣ ಪೋಡನಲ್ಲಿ ಕಂಡುಬರುವ ಜಾಗ ನನ್ನ ತಾತನಿಗೆ ಮಂಜೂರಾದ ಜಾಗವಿರುತ್ತದೆ. ನಿಪಿ.7 ರಲ್ಲಿ ಕಂಡುಬರುವ ಜಾಗ ನಮಗೆ ಸೇರಿದ 2 ಎಕರೆ 9 ಗುಂಟೆಯ ಜಾಗ ಎಂದರೆ ಸರಿಯಲ್ಲ. ನಿಪಿ.7 ರಲ್ಲಿರುವ 4 ಎಕರೆ 18 ಗುಂಟೆಯ ಜಾಗ ವಾದಿಯವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ.7 ರ ಸ್ಕೆಚ್ ತಪ್ಪಾಗಿರುತ್ತದೆ ಅದನ್ನು ನಾನು ಎ ಡಿ ಎಲ್ ಆರ್ ಕಚೇರಿಯಲ್ಲಿತಕರಾರು ಮಾಡಿರುತ್ತೇನೆ. ಸದರಿ ಅರ್ಜಿಯು ನ್ಯಾಯಾಲಯದಲ್ಲಿ ತೀರ್ಮಾನವಾದ ನಂತರ ಮುಕ್ತಾಯ ಮಾಡುತೇವೆಂದು ತಿಳಿಸಿರುತ್ತಾರೆ. ಆ ಬಗ್ಗೆ ನಾವು ಮೇಲ್ಮನವಿಯನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ.

ಎ ಸಿ ನ್ಯಾಯಾಲಯದಲ್ಲಿ ನನ್ನ ತಾಯಿ ನೀಡಿರುವ ದೂರಿನ ಬಗ್ಗೆ ನನಗೆ ಗೊತ್ತಿಲ್ಲ. ನನ್ನತಾಯಿ ಡಿ ಡಿ ಎಲ್ ಆರ್ ರವರ ಮುಂದೆ ಮೇಲ್ಮನವಿ ಸಂ.130/2021-22 ರಂತೆ ಮೇಲ್ಮನವಿಯನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಿದೆ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ವಾದಿಯವರೇ ಮಾಲೀಕರು ಹಕ್ಕುದಾರರು ಎಂದರೆ ಸರಿಯಲ್ಲ.

1ನೇ ವಾದಿಯ ಗಂಡನಿಗೆಬ್ಲಾಕ್ ನಂ.72 ರಲ್ಲಿ 2 ಎಕರೆ ಜಮೀನು ಇತ್ತು ಎಂದರೆ ಸರಿ. ಬ್ಲಾಕ್ ನಂ.23 ರಲ್ಲಿ 2 ಎಕರೆ 20 ಗುಂಟೆ ಗದ್ದೆ ಇತ್ತು. ಆ ಎರಡು ಸ್ವತ್ತನ್ನು ಜಂಟಿ ಮಾಡಿ ಸರ್ವೆ ನಂ.97/1 ರಲ್ಲಿ 4 ಎಕರೆ 18 ಗುಂಟೆ ಎಂದು ಪಹಣಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮಾಲೀಕತ್ವ ಇಲ್ಲದಿದ್ದರೂ ಸಹ ವಾದಿಯವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ 9/18 ಡಿಕ್ರಿಯಾದ ನಂತರ ಅನಾವಶ್ಯಕವಾಗಿ ಪ್ರತಿವಾದಿಯವರ ಜಾಗಕ್ಕೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯವರ ಕಾಫಿ ಸಿಲ್ವರ್ ಗಿಡವನ್ನು ಕಡಿಯಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಡಿಕ್ರಿಯಾದರೆ ನಮಗೆ ತೊಂದರೆಯಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**